# 1999

# ANTHROPOLOGY

## Paper 1

*Time : 3 Hours ]* *[ Maximum Marks : 300*

### *INSTRUCTIONS*

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket.*

*Candidates should attempt questions from Section A and from either Section B (I) or Section B (II) according to the instructions given under each section. Answer **six** questions in all.*

*All questions carry equal marks.*

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

[Turn over

## SECTION A

*Answer any **three** questions including Question 1, which is compulsory.*

1. Write short notes on any ***two*** of the following in about 200 words each :

   (a) Culture and Civilisation

   (b) Kula ring

   (c) Totemism

2. Distinguish between incest and exogamy. Discuss the various explanations for incest regulations universally.

3. Discuss the importance of descent and alliance in the formation of kin groups.

4. Bring out the structural difference between stateless and state societies. Discuss with the help of Indian tribal groups.

5. "Participant observation is a unique anthropological fieldwork method." — Discuss.

## ವಿಭಾಗ A

*ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. 1ನೇ ಪ್ರಶ್ನೆಯನ್ನು ಕಡ್ಡಾಯವಾಗಿ ಉತ್ತರಿಸ ತಕ್ಕದ್ದು.*

1. ಈ ಕೆಳಗಿನ *ಎರಡರ* ಬಗ್ಗೆ ಉತ್ತರಿಸಿ (ಪ್ರತಿಉತ್ತರ ಸುಮಾರು 200 ಪದಗಳಲ್ಲಿ) :

   (ಎ) ಸಂಸ್ಕೃತಿ ಮತ್ತು ನಾಗರಿಕತೆ

   (ಬಿ) ಕುಲ ಉಂಗುರ

   (ಸಿ) ಕುಲದೇವತಾರಾಧನೆ

2. ಅಗಮ್ಯಗಮನ (incest) ಮತ್ತು ಹೊರಬಾಂಧವ್ಯಗಳ ನಡುವಣ ವ್ಯತ್ಯಾಸವನ್ನು ತಿಳಿಸಿ. ಸಾರ್ವತ್ರಿಕ ಅಗಮ್ಯಗಮನ ನಿಯಂತ್ರಣಗಳಿಗೆ ಇರುವ ವಿವಿಧ ವಿವರಣೆಗಳನ್ನು ಚರ್ಚಿಸಿ.

3. ಬಂಧು ವರ್ಗಗಳ ರೂಪಗೊಳ್ಳುವಿಕೆಯಲ್ಲಿ ವಂಶಾವಳಿ ಮತ್ತು ಸಂಬಂಧಗಳ ಪ್ರಾಮುಖ್ಯತೆಯನ್ನು ಚರ್ಚಿಸಿ.

4. ರಾಜ್ಯರಹಿತ ಮತ್ತು ರಾಜ್ಯದಿಂದ ಕೂಡಿದ ಸಮಾಜಗಳ ವ್ಯವಸ್ಥೆಯ ನಡುವಣ ರಚನಾತ್ಮಕ ವ್ಯತ್ಯಾಸವನ್ನು ತಿಳಿಸಿ. ಭಾರತೀಯ ಬುಡಕಟ್ಟು ಜನಾಂಗಗಳ ನೆರವಿನೊಂದಿಗೆ ಚರ್ಚಿಸಿ.

5. "ಭಾಗೀದಾರನ ಅವಲೋಕನವು ಒಂದು ಅಪೂರ್ವ ಮಾನವಶಾಸ್ತ್ರೀಯ ಕ್ಷೇತ್ರಕಾರ್ಯ ಕ್ರಮವಾಗಿದೆ." – ಚರ್ಚಿಸಿ.

## ವಿಭಾಗ B (I)

*6ನೇ ಪ್ರಶ್ನೆಯೂ ಸೇರಿದಂತೆ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. 6ನೆ ಪ್ರಶ್ನೆಯನ್ನು ಕಡ್ಡಾಯವಾಗಿ ಉತ್ತರಿಸತಕ್ಕದ್ದು.*

6. ಈ ಕೆಳಗಿನ ಎರಡರ ಬಗ್ಗೆ ಉತ್ತರಿಸಿ (ಪ್ರತಿಉತ್ತರ ಸುಮಾರು 200 ಪದಗಳಲ್ಲಿ) :
   (ಎ) ಲಾಮಾರ್ಕ್‌ನ ವಾದ
   (ಬಿ) ಡ್ರೈಯೋಪಿಥೆಕಸ್
   (ಸಿ) ಅನುವಂಶೀಯತೆ ಮತ್ತು ಪರಿಸರ

7. "ವರ್ಗ ಪ್ರಾಮುಖಿಗಳ ಪ್ರಾಕೃತಿಕ (ಟ್ಯಾಕ್ಸನಾಮಿಕಲ್) ವರ್ಗೀಕರಣವು ವಿಕಾಸವಾದದ ವಾಸ್ತವಿಕತೆಯ ಪ್ರತಿಬಿಂಬ." – ಈ ಹೇಳಿಕೆಯನ್ನು ವಿವರಿಸಿ.

8. ಮೆಂಡೆಲಿಯನ್ ಜನಸಂಖ್ಯೆ ಎಂದರೇನು ? ಜನಸಂಖ್ಯಾಶಾಸ್ತ್ರದ ಅಧ್ಯಯನದಲ್ಲಿ ಇದರ ಪ್ರಾಮುಖ್ಯತೆಯನ್ನು ವಿವರಿಸಿ.

9. "ಜನಾಂಗವು ಪ್ರಮುಖವಾಗಿ ಜೀವಶಾಸ್ತ್ರೀಯ ಸ್ವರೂಪದ್ದಾಗಿದೆ." – ಈ ಹೇಳಿಕೆಯ ಇಂಗಿತಾರ್ಥವನ್ನು ಚರ್ಚಿಸಿ.

10. ಅಂತಃಪ್ರಜನನದ (inbreeding) ಅನುವಂಶಿಕ ಇಂಗಿತಾರ್ಥಗಳೇನು ?

## ವಿಭಾಗ B (II)

*ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸತಕ್ಕದ್ದು. 11ನೇ ಪ್ರಶ್ನೆಯನ್ನು ಕಡ್ಡಾಯವಾಗಿ.*

11. ಯಾವುದಾದರೂ **ಎರಡರ** ಬಗ್ಗೆ ಸುಮಾರು 200 ಪದಗಳಲ್ಲಿ ಉತ್ತರಿಸಿ :
   (ಎ) ತಂತ್ರಕೌಶಲ ಮತ್ತು ವಿಧಾನ
   (ಬಿ) ಪ್ರತಿಮಾನಗಳು ಮತ್ತು ಮೌಲ್ಯಗಳು
   (ಸಿ) ಮೂಲ ವ್ಯಕ್ತಿತ್ವ ರಚನೆ

12. ಮಾನವ ಶಾಸ್ತ್ರದ ಜ್ಞಾನಕ್ಕೆ ಪ್ರಾರಂಭಿಕ ವಿಕಾಸವಾದದ ಅಧ್ಯಯನಗಳ ಕೊಡುಗೆ ಬಗ್ಗೆ ಚರ್ಚಿಸಿ.

13. ತುಲನಾತ್ಮಕ ಪದ್ಧತಿ ಎಂದರೇನು ? ಮಾನವಶಾಸ್ತ್ರದ ತಿಳಿವಳಿಕೆಯಲ್ಲಿ ಅದರ ಪ್ರಾಮುಖ್ಯತೆಯನ್ನು ಚರ್ಚಿಸಿ.

14. ಬಂಧುತ್ವದ ರಚನಾತ್ಮಕ ತಿಳಿವಳಿಕೆಗೆ ಲೆವಿ–ಸ್ಟ್ರಾಸ್‌ನ ಕೊಡುಗೆ ಬಗ್ಗೆ ಚರ್ಚಿಸಿ.

15. ಸಾಂಸ್ಕೃತಿಕ ಸಾಪೇಕ್ಷವಾದದ ಪರಿಕಲ್ಪನೆಯನ್ನು ವಿವರವಾಗಿ ತಿಳಿಸಿ. ವಿಪತ್ತನ್ನು ಉಂಟುಮಾಡುವಲ್ಲಿ ಸ್ವಜಾತೀಕೇಂದ್ರವಾದದ (ethnocentrism) ಪ್ರಾಮುಖ್ಯತೆಯನ್ನು ಚರ್ಚಿಸಿ.

# 1999

# ಮಾನವಶಾಸ್ತ್ರ

## ಪ್ರಶ್ನೆಪತ್ರಿಕೆ 2

*ಸಮಯ : 3 ಗಂಟೆಗಳು ]* *[ ಗರಿಷ್ಠ ಅಂಕಗಳು : 300*

### *ಸೂಚನೆಗಳು*

*ಪ್ರತಿ ಪ್ರಶ್ನೆಯನ್ನು ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಮುದ್ರಿಸಲಾಗಿದೆ.*

*ನಿಮ್ಮ ಪ್ರವೇಶ ಪತ್ರದಲ್ಲಿ ನಮೂದಿಸಿರುವ ಮಾಧ್ಯಮದಲ್ಲೇ (ಇಂಗ್ಲೀಷ್ ಅಥವಾ ಕನ್ನಡ) ನೀವು ಉತ್ತರಗಳನ್ನು ಬರೆಯತಕ್ಕದ್ದು; ಇದನ್ನು ಉತ್ತರ ಪತ್ರಿಕೆಯ ಮುಖಪುಟದಲ್ಲಿ ಪ್ರತ್ಯೇಕವಾಗಿ ನೀಡಲಾದ ಜಾಗದಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು. ಪ್ರವೇಶ ಪತ್ರದಲ್ಲಿ ನಮೂದಿಸದ ಮಾಧ್ಯಮದಲ್ಲಿ ಬರೆದ ಉತ್ತರಗಳಿಗೆ ಅಂಕಗಳನ್ನು ನೀಡಲಾಗುವುದಿಲ್ಲ.*

*ಅಭ್ಯರ್ಥಿಗಳು ಕಡ್ಡಾಯ ಪ್ರಶ್ನೆಗಳಾದ **1** ಮತ್ತು **5** ನ್ನು ಉತ್ತರಿಸಬೇಕು; ಉಳಿದಂತೆ ಮೂರು ಪ್ರಶ್ನೆಗಳನ್ನು ಉತ್ತರಿಸುವಾಗ ಪ್ರತಿ ವಿಭಾಗದಿಂದ ಕನಿಷ್ಠ ಒಂದು ಪ್ರಶ್ನೆಯನ್ನು ಆಯ್ಕೆ ಮಾಡತಕ್ಕದ್ದು.*

*ಎಲ್ಲಾ ಪ್ರಶ್ನೆಗಳ ಅಂಕಗಳು ಸಮಾನವಾಗಿರುತ್ತವೆ.*

***Note :*** *The English version of the instructions is printed on the front cover of this question paper.*

## SECTION A

1. Answer any ***three*** of the following; each answer should not exceed 200 words :

   (a) Madrasian industry

   (b) *Varna*

   (c) Nature-Man-Spirit complex

   (d) Jajmani System

2. Bring out the salient features of the Indus Valley Civilisation. Discuss the theories of its origin.

3. Discuss the linguistic classification and distribution of the Indian population.

4. Elaborate the basic anthropological concepts used in understanding Indian society. Discuss to what extent they are useful in understanding contemporary Indian society.

## ವಿಭಾಗ A

1. ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರನ್ನು ಉತ್ತರಿಸಿ, ಪ್ರತಿ ಉತ್ತರವು 200 ಪದಗಳನ್ನು ಮೀರಕೂಡದು :

   (ಎ) ಮದ್ರಾಸಿಯನ್ (Madrasian) ಕೈಗಾರಿಕೆ

   (ಬಿ) ವರ್ಣ

   (ಸಿ) ಪ್ರಕೃತಿ–ಮಾನವ–ಆತ್ಮ ಸಂಸ್ಕೃಷ್ಟಿ (complex)

   (ಡಿ) ಜಜಮಾನಿ ವ್ಯವಸ್ಥೆ

2. ಸಿಂಧೂ ಕಣಿವೆ ನಾಗರಿಕತೆಯ ಮುಖ್ಯ ಲಕ್ಷಣಗಳನ್ನು ತಿಳಿಸಿ, ಅದರ ಉಗಮದ ಸಿದ್ಧಾಂತಗಳನ್ನು ಚರ್ಚಿಸಿ.

3. ಭಾರತೀಯ ಜನಸಂಖ್ಯೆಯ ವರ್ಗೀಕರಣ ಮತ್ತು ಹಂಚಿಕೆಯ ಬಗ್ಗೆ ಚರ್ಚಿಸಿ.

4. ಭಾರತೀಯ ಸಮಾಜವನ್ನು ತಿಳಿಯುವಲ್ಲಿ ಬಳಸಲಾದ ಮೂಲ ಮಾನವಶಾಸ್ತ್ರೀಯ ಪರಿಕಲ್ಪನೆಗಳನ್ನು ವಿವರಿಸಿ. ಸಮಕಾಲೀನ ಭಾರತೀಯ ಸಮಾಜವನ್ನು ತಿಳಿಯುವಲ್ಲಿ ಅವು ಎಷ್ಟರ ಮಟ್ಟಿಗೆ ಪ್ರಯೋಜನಕಾರಿಯಾಗಿವೆ ಎಂಬುದನ್ನು ಚರ್ಚಿಸಿ.

[Turn over

## SECTION B

5. Answer any ***three*** of the following; each answer should not exceed 200 words :

   (a) National integration

   (b) Socio-economic classification of Indian tribes

   (c) *Ashram* schools

   (d) I.T.D.A.

6. What are the major problems faced by the Indian tribal communities which are hindering their progress ?

7. Discuss the impact of industrialisation on the tribal communities of Chota Nagpur area.

8. What are the major Constitutional provisions for Scheduled Tribes ? Do you think that the safeguards have achieved their purpose ?

## ವಿಭಾಗ B

5. ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರನ್ನು ಉತ್ತರಿಸಿ, ಪ್ರತಿ ಉತ್ತರವು 200 ಪದಗಳನ್ನು ಮೀರಕೂಡದು :

   (ಎ) ರಾಷ್ಟ್ರೀಯ ಭಾವೈಕ್ಯತೆ

   (ಬಿ) ಭಾರತೀಯ ಬುಡಕಟ್ಟುಗಳ ಸಾಮಾಜಿಕ–ಆರ್ಥಿಕ ವರ್ಗೀಕರಣ

   (ಸಿ) ಆಶ್ರಮ ಶಾಲೆಗಳು

   (ಡಿ) ಐ.ಟಿ.ಡಿ.ಎ.

6. ಭಾರತೀಯ ಬುಡಕಟ್ಟು ಜನಾಂಗಗಳ ಪ್ರಗತಿಗೆ ಅಡಚಣೆ ಉಂಟುಮಾಡುವ ಪ್ರಮುಖ ಸಮಸ್ಯೆಗಳಾವುವು ?

7. ಛೋಟಾನಾಗಪುರ ಪ್ರದೇಶದ ಬುಡಕಟ್ಟು ಜನಾಂಗಗಳ ಮೇಲೆ ಔದ್ಯಮೀಕರಣದ ಪ್ರಭಾವವನ್ನು ಕುರಿತು ಚರ್ಚಿಸಿ.

8. ಪರಿಶಿಷ್ಟ ಪಂಗಡಗಳಿಗಾಗಿ ಇರುವ ಪ್ರಮುಖ ಸಂವಿಧಾನಾತ್ಮಕ ಪ್ರಾವಧಾನಗಳಾವುವು ? ಈ ರಕ್ಷೆಗಳು ಅವುಗಳ ಉದ್ದೇಶವನ್ನು ಸಾಧಿಸಿವೆಯೇ ಎಂಬುದರ ಬಗ್ಗೆ ನಿಮ್ಮ ಅಭಿಪ್ರಾಯವೇನು ?